# ಒಲೆ ಹಚ್ಚುವ ಚಿಮ್ಮಟ

ಚಿತ್ರದಲ್ಲಿರುವುದು ಒಲೆ ಹಚ್ಚುವ ಚಿಮ್ಮಟ. ಹಿಂದೆಲ್ಲ ವಿದ್ಯಾರ್ಥಿಗಳು ಪಟ್ಟಣ, ನಗರಗಳಲ್ಲಿ ಬಾಡಿಗೆ ಕೊಠಡಿ ಮಾಡಿಕೊಂಡು ಓದುತ್ತಿದ್ದರು. ಅನ್ನವನ್ನು ತಾವೇ ಬೇಯಿಸಿಕೊಳ್ಳುತ್ತಿದ್ದರು. ಆಗ ಇದ್ದಿಲಿನ ಒಲೆ ಬಳಸುವುದು ರೂಢಿಯಲ್ಲಿತ್ತು. ಇದ್ದಿಲನ್ನು ಹೊತ್ತಿಸಬೇಕಾದರೆ ಈ ಉಪಕರಣ ಬಳಕೆಗೆ ಬರುತ್ತಿತ್ತು.

**-ಎಸ್.ಎನ್.ಮಹಾಬಲರಾವ್,**
**ನರಸಿಂಹರಾಜಪುರ**





# ಹದಿನಾಲ್ಕು ಅಡಿಯ ಹೆಬ್ಬಾವು

ಪಶ್ಚಿಮ ಘಟ್ಟದಲ್ಲಿನ ಕಾಡುಗಳು ಬರಿದಾಗುತ್ತಿದ್ದು ವನ್ಯ ಜೀವಿಗಳು ನಾಡಿಗೆ ಲಗ್ಗೆ ಹಾಕುತ್ತಿವೆ. ಕಾಡಿನಲ್ಲಿ ಜಲಮೂಲಗಳು ಬತ್ತಿ ಹೋಗುತ್ತಿರುವುದರಿಂದ ನೀರಿನ ಮೂಲಗಳನ್ನು ಅರಸಿ ಊರಿನ ಕಡೆಗೆ ವಲಸೆ ಬರುವುದು ಸಾಮಾನ್ಯ. ಇತ್ತೀಚೆಗೆ ಯಲ್ಲಾಪುರ ತಾಲ್ಲೂಕಿನ ಹೊನಗದ್ದೆ ಗ್ರಾಮದಲ್ಲಿ ಪ್ರತ್ಯಕ್ಷವಾದ ಹದಿನಾಲ್ಕು ಅಡಿಯ ಹೆಬ್ಬಾವು ಈ ಭಾಗದಲ್ಲಿ ಕಂಡ ಅತಿ ದೊಡ್ಡ ಹೆಬ್ಬಾವು. ಅರಣ್ಯ ರಕ್ಷಕರು ಹಾವಿನ ತಜ್ಞರನ್ನು ಕರೆಸಿ ಹೆಬ್ಬಾವು ಹಿಡಿದು ದೂರದ ಅಣಶಿ ಕಾಡಿಗೆ ಸಾಗಿಸಿದರು.

**ಚಿತ್ರ- ಬರಹ: ದತ್ತಾತ್ರೇಯ ಭಟ್ಟ,**
**ಕಣ್ಣಿಪಾಲ**

# ಅಪರೂಪದ ಶಿಲ್ಪ

ಈ ಚಿತ್ರದಲ್ಲಿರುವುದು ಸೀತಾಪಹರಣದ ನಂತರ ರಾಮಭಕ್ತ ಹನುಮಂತ ಸೀತಾಮಾತೆಗಾಗಿ ದುರ್ಬೀನಿನಂತಹ ಉಪಕರಣ ಬಳಸಿ ಹುಡುಕುತ್ತಿರುವ ದೃಶ್ಯ. ಅರಸೀಕೆರೆ ತಾಲ್ಲೂಕು ಜಾವಗಲ್‌ನ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದ ಹೊರ ಭಿತ್ತಿಯಲ್ಲಿರುವ ಈ ಶಿಲ್ಪ ಪ್ರವಾಸಿಗರನ್ನು ಆಕರ್ಷಿಸುತ್ತದೆ.

**-ಕೆ.ಎನ್. ಪ್ರಭಾಕರ ಗುಪ್ತ,**
**ಹಾಸನ**

